# ಪ್ರಥಮ ಪಿಯುಸಿ ಮಧ್ಯವಾರ್ಷಿಕ ಪರೀಕ್ಷೆ, ಅಕ್ಟೋಬರ್ 2023 (ಸೆಟ್–2)

## ವಿಷಯ : ಕನ್ನಡ (01)

ಸಮಯ : 3 ಗಂಟೆ 15 ನಿಮಿಷಗಳು ಅಂಕಗಳು : 80

### 'ಅ' – ವಿಭಾಗ

I ಅ ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. 10x1=10

1. ಅಕ್ಕಮಹಾದೇವಿಯವರ ಅಂಕಿತನಾಮ ಯಾವುದು ?
   ಅ) ಗುಹೇಶ್ವರ ಆ) ಸಿದ್ಧಯ್ಯಪ್ರಿಯ ಇ) ಚೆನ್ನಮಲ್ಲಿಕಾರ್ಜುನ ಈ) ಕೂಡಲಸಂಗಮದೇವ
2. ಶಿವನು ಯಾರ ಜೊತೆ ಊಟ ಮಾಡಿದ ?
   ಅ) ಕರಿಕಾಲ ಚೋಳ ಆ) ಮಾದರ ಚೆನ್ನ ಇ) ಪಾರ್ವತಿ ಈ) ಮೈಲ
3. 'ಕಡೆಗೆ ಕರುಣಾಳು ರಾಘವನಲ್ಲಿ ತಪಿಲ್ಲ' – ಈ ಹೇಳಿಕೆಯು ರಾಮನ ಬಗ್ಗೆ ಸೀತೆಗಿರುವ ಯಾವ ಭಾವನೆ ಸೂಚಿಸುತ್ತದೆ.
   ಅ) ದ್ವೇಷ ಭಾವನೆ ಆ) ವೈಶಮ್ಯ ಭಾವನೆ ಇ) ಗೌರವ ಭಾವನೆ ಈ) ಕ್ರೋಧ ಭಾವನೆ
4. ಮೃಗ ಪಕ್ಷಿಗಳು ಎಲ್ಲಿ ಆಡುತ್ತಿದ್ದವು ?
   ಅ) ಅಡವಿಯಲ್ಲಿ ಆ) ಬೆಟ್ಟಗಳಲ್ಲಿ ಇ) ಮರಗಳಲ್ಲಿ ಈ) ಊರಿನಲ್ಲಿ
5. ಅಖಂಡ ಕರ್ನಾಟಕದ ಮುಖ್ಯ ಮಂತ್ರಿ ಯಾರು ?
   ಅ) ಪಂಪ ಆ) ಪೊನ್ನ ಇ) ಹರಿಹರ ಈ) ನೃಪತುಂಗ
6. ಗ್ರಾಮದ ಅಧಿದೇವತೆ ಯಾರು ?
   ಅ) ಅಣ್ಣಮ್ಮ ಆ) ಸಾಕಮ್ಮ ಇ) ನಾಗಮ್ಮ ಈ) ಮಾರಮ್ಮ
7. ಜ್ಯೋತಿಷ್ಯದ ಪ್ರಕಾರ ಒಂಬತ್ತು ಗ್ರಹಗಳಿವೆ. ಆದರೆ ಸೂರ್ಯ – ಚಂದ್ರರು ಗ್ರಹಗಳಲ್ಲ – ಈ ಹೇಳಿಕೆಯು ಕೆಳಗಿನ ಯಾವ ಅಭಿಪ್ರಾಯವನ್ನು ಸಮರ್ಥಿಸುತ್ತದೆ ?
   ಅ) ಸರಿಯಾದ ಅಭಿಪ್ರಾಯ ಆ) ಗೊಂದಲದ ಅಭಿಪ್ರಾಯ ಇ) ಸರ್ವಸಮ್ಮತ ಅಭಿಪ್ರಾಯ ಈ) ವೈಜ್ಞಾನಿಕ ಅಭಿಪ್ರಾಯ
8. ಬೋಳೇಶಂಕರ ಎಲ್ಲಿ ಕುಳಿತು ಊಟ ಮಾಡಬೇಕೆಂದು ಅವರ ಅತ್ತಿಗೆ ಹೇಳುತ್ತಾಳೆ ?
   ಅ) ಪಡಸಾಲೆಯಲ್ಲಿ ಆ) ಕೊಟ್ಟಿಗೆಯಲ್ಲಿ ಇ) ಕೋಣೆಯಲ್ಲಿ ಈ) ನೆರಮನೆಯಲ್ಲಿ
9. ರಾಜಕುಮಾರಿಗೆ ಬಂದ ರೋಗ ಯಾವುದು ?
   ಅ) ಕಾಲುನೋವು ಆ) ತಲೆನೋವು ಇ) ಹೊಟ್ಟೆನೋವು ಈ) ಕಣ್ಣುನೋವು
10. "ಕೊಳೆತ ಬಲೆ ಹಾಕಿ ಎಳೆದರೂ ಬರುವಂಥವರು". ಪಿಶಾಚಿಯ ಈ ಹೇಳಿಕೆಯು ಇವರಿಗೆ ಸಂಬಂಧಿಸಿದುದಾಗಿದೆ.
    ಅ) ಬೋಳೇಶಂಕರನಿಗೆ ಆ) ಬೋಳೇಶಂಕರನ ಅಣ್ಣಂದಿರಿಗೆ ಇ) ಸೈತಾನನಿಗೆ ಈ) ಪಿಶಾಚಿಗಳಿಗೆ

ಆ. ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : 1x5=5

[ಲಾರ್ ಕೋಟ್, ಖಗೋಳಶಾಸ್ತ್ರ, ದೊಡ್ಡಬಾನಿ, ಇನ್ನೂರ ಐವತ್ತು, ಐವತ್ತು–ಅರವತ್ತು]

11. ಹಲಸಿನ ಮರ ಮಾರಿದ್ದರಿಂದ ಕರಿಸಿದ್ದೇಗೌಡನಿಗೆ ಸಿಕ್ಕ ಹಣ ______
12. ನೀರಿಗಾಗಿ ______ ನ್ನು ತರುತ್ತಿದ್ದ.
13. ಜ್ಯೋತಿಷ್ಯದ ಉಗಮವು ______ರಲ್ಲಿ ಕಂಡುಬರುತ್ತದೆ.
14. ಸೇಂಗಾ ಮಾರುವವನ ದಿನದ ಸಂಪಾದನೆ ______
15. ಕಪಿಲ ವಸ್ತುವಿನ ಇಂದಿನ ಹೆಸರು ______

ಇ. ಹೊಂದಿಸಿ ಬರೆಯಿರಿ: 1x5=5

| | ಅ | | ಬ |
|---|---|---|---|
| 16. | ರನ್ನ | – | ಅ) ರಗಳೆ ಕವಿ |
| 17. | ಅಲ್ಲಮ ಪ್ರಭು | – | ಆ) ಗದಾಯುದ್ಧ |
| 18. | ಹರಿಹರ | – | ಇ) ಎಂದಿಗೆ |
| 19 | ಕುವೆಂಪು | – | ಈ) ಗುಹೇಶ್ವರ |
| 20. | ಬಿ. ಸಿ. ರಾಮಚಂದ್ರ ಶರ್ಮ | – | ಉ) ಅಖಂಡ ಕರ್ನಾಟಕ |
| | | | ಊ) ಸಿಸು ಮಕ್ಕಳಿಗೊಲಿದ ಮಾದೇವ |

(ಪು.ತಿ.ನೋ)

https://www.karnatakaboard.com

## 'ಆ' – ವಿಭಾಗ

**II ಅ. ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.** 3x2=6

21. ತಗಹು, ಸೂತಕಗಳು ಯಾವುವು ?
22. ಚೆನ್ನಯ್ಯನ ಗುಪ್ತ ಭಕ್ತಿ ಯಾವ ರೀತಿಯದು ?
23. ಸೀತೆಯು ಸೌಮಿತ್ರಿಗೆ ಹಿಂತಿರುಗಿ ಹೋಗೆಂದು ಏಕೆ ಹೇಳಿದಳು ?
24. ಮಳೆಯನ್ನು ನೋಡಿ ಕನ್ನಯ್ಯ ತನ್ನೊಳಗೆ ಏನೆಂದುಕೊಳ್ಳುತ್ತಾನೆ ?

**ಆ. ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** 2x2=4

25. ರಾಗಿ ಬೀಸುವ ಕಲ್ಲನ್ನು ಕುರಿತು ಜನಪದ ಹೆಣ್ಣುಮಗಳ ಪ್ರಾರ್ಥನೆ ಯಾವುದು ?
26. ಬುದ್ಧನು 'ವಿನಯ ಪಿಟಿಕಾ' ಗ್ರಂಥದಲ್ಲಿ ಯಾರಿಂದ ದೂರವಿರಬೇಕೆಂದು ಎಚ್ಚರಿಸಿದ್ದಾನೆ ?
27. ಮಾಸ್ತರರು ಬಾಡಿಗೆ ಮನೆಯನ್ನು ಹೇಗೆ ಖರೀದಿಸಿದರು ?
28. ನೇಪಾಳದ ವೈಮಾನಿಕ ಸಾರಿಗೆ ವ್ಯವಸ್ಥೆ ಹೇಗಿದೆ ?

**ಇ. ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.** 3x2=6

29. ಬೆಟ್ಟದ ಮೇಲಿನ ದೇವತೆಯು ಬೋಳೇಶಂಕರನ ಅಣ್ಣ ಅತ್ತಿಗೆಯರಿಗೆ ಹೇಗೆ ಕಾಣಿಸುತ್ತದೆ ?
30. ಕೋಡಂಗಿಯು ತಾನು ಬೆಳಗ್ಗೆಯಿಂದ ಏನೇನು ಕೆಲಸ ಮಾಡಿದೆನೆಂದು ಹೇಳುತ್ತಾನೆ ?
31. ಸೈತಾನನು ಮೂರು ಪಿಶಾಚಿಗಳನ್ನು ಭೂಲೋಕಕ್ಕೆ ಕಳುಹಿಸಿದ್ದು ಏಕೆ ?
32. ರಾಜಕುಮಾರಿಯ ಹೊಟ್ಟೆನೋವು ವಾಸಿಮಾಡುವವರಿಗೆ ಏನೇನು ಬಹುಮಾನ ಕೊಡುವುದಾಗಿ ಡಂಗೂರ ಸಾರಿಸುತ್ತಾರೆ ?

## 'ಇ'–ವಿಭಾಗ

**III ಅ. ಕೆಳಗಿನ ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** 2x3=6

33. ಕಾವೇರಿ ಸೋಂಕಿದರ ಪಾಪಮಂ ಸೋವೇರಿ
34. ಮಾಯಾದ ಮಳೆಯ ಕಳುಗಪ್ಪ
35. ಅಂತು ಬಂದಿತು ಬಂದೇ ಬಂದಿತು ಎಂಥ ಎಂಥಾ ಬಿಡುಗಡೆ.

**ಆ. ಕೆಳಗಿನ ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ.** 1x3=3

36. ಮುದ್ದೆ ಮಾಡಲಿಕ್ಕೆ ಪಳಗಿದ ಕೈಗಳೇ ಆಗಬೇಕು.
37. ಅಲ್ಲಿ ಅಳಿದವರೆ ಪಾಪಿಗಳಾಗಿದ್ದರು.

**ಇ. ಕೆಳಗಿನ ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ.** 1x3=3

38. ಒಂದು ಹೊತ್ತು ರೊಟ್ಟಿ ತಿನ್ನದಿದ್ದರೆ ನಾನೇನು ಸಾಯುವುದಿಲ್ಲ.
39. ಹೆಣ್ಣಿದ್ದ ಮನೆಯ ಸೌಭಾಗ್ಯವೆ ಬೇರೆ.

## 'ಈ'–ವಿಭಾಗ

**IV ಅ. ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** 2x4=8

40. ಅಭಿಮನ್ಯುವಿನ ಶೌರ್ಯ ಸಾಹಸಗಳನ್ನು ದುರ್ಯೋಧನ ಹೇಗೆ ಹೊಗಳುತ್ತಾನೆ ?
41. ಕಾಡಿನಲ್ಲಿ ಜಾನಕಿ ಏನೇನು ಕಾಣಲು ಬಯಸಿದಳು ?
42. ಎಲ್ಲವನ್ನು ರಕ್ಷಿಸುವ ದೇವರು ನಮ್ಮನ್ನು ರಕ್ಷಿಸುತ್ತಾನೆ ಎಂಬುದನ್ನು ದಾಸರು ಹೇಗೆ ಹೇಳಿದ್ದಾರೆ ?
43. ಸರಸ್ವತಿಯ ಸಚಿವ ಮಂಡಲವನ್ನು ಕುರಿತು ಬರೆಯಿರಿ.

**ಆ. ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ** 1x4=4

44. ಗಾಂಧಿ ಎಂಬ ಹುಡುಗನ ಸಾವಿನ ಸಂದರ್ಭವನ್ನು ವಿವರಿಸಿ.
45. ಅನಾಥ ಬಾಲಕರಾಶ್ರಮವನ್ನು ಶಾಸ್ತ್ರಿ ಮಾಸ್ತರರು ಹೇಗೆ ಪ್ರಾರಂಭಿಸಿದರು ? ಅದರ ಉದ್ದೇಶವೇನು ?
46. ಮಾಯಾದೇವಿ ದೇವಾಲಯದ ಪರಿಸರ ಹೇಗಿತ್ತು ?

**ಇ. ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ** 1x4=4

47. ಬೋಳೇಶಂಕರನ ಅಣ್ಣಂದಿರೇ ವಾಸಿ ಎಂದು ಪಿಶಾಚಿ ಹೇಳಲು ಕಾರಣವೇನು ?
48. ಬೋಳೇಶಂಕರನು ನಾಣ್ಯ ಹಾಗೂ ಸೈನಿಕರನ್ನು ಪಡೆದ ಪ್ರಸಂಗವನ್ನು ವಿವರಿಸಿ.



https://www.karnatakaboard.com

## ಭಾಷಾಭ್ಯಾಸ

V ಅ. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. **4x2=8**

**49. ಕೆಳಗಿನ ಎರಡು ಪದಗಳಿಗೆ ಅರ್ಥ ಬರೆಯಿರಿ.**

ಅವನಿ, ಅರ್ಕ, ಪುಂಡರೀಕ

**50. ಕೆಳಗಿನ ಎರಡು ಪದಗಳಿಗೆ ನಾನಾರ್ಥ ಬರೆಯಿರಿ.**

ಶರ, ಬಟ್ಟೆ, ಕವಿ

**51. ಕೆಳಗಿನ ಎರಡು ಪದಗಳಿಗೆ ವಿರುದ್ಧ ಪದ ಬರೆಯಿರಿ.**

ಖಂಡ, ದುರ್ಬಲ, ಆಡಂಬರ

**52. ಯಾವುದಾದರೂ ಎರಡು ಅನ್ಯದೇಶಿ ಪದಗಳನ್ನು ಬರೆಯಿರಿ.**

**53. ಕೆಳಗಿನ ಎರಡು ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ.**

ಆಕಟಕಟ, ಅಡಿಗಡಿಗೆ, ಕಸಮುಸುರೆ

**54. ಕೆಳಗಿನ ಯಾವುದಾದರೂ ಎರಡು ಪದಗಳನ್ನು ಬಿಡಿಸಿ ಬರೆಯಿರಿ.**

ಎಂದಿಗಯ್ಯ, ಕಟ್ಟೋಗರ, ಕಾವೇರಿ

ಆ. ಯಾವುದಾದರೂ ಒಂದನ್ನು ಕುರಿತು ಪ್ರಬಂಧ ಬರೆಯಿರಿ. **1x4=4**

55. ಮೂಢ ನಂಬಿಕೆ

**ಅಥವಾ**

ಬಾಲ್ಯದ ನೆನಪುಗಳು

ಇ. ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ. **1x4=4**

56. ನಿಮ್ಮ ಕಾಲೇಜಿನಲ್ಲಿ ಆಚರಿಸಿದ ಸ್ವಾತಂತ್ರ್ಯ ದಿನಾಚರಣೆಯನ್ನು ಕುರಿತು ನಿಮ್ಮ ತಂದೆಗೆ ಒಂದು ಪತ್ರ ಬರೆಯಿರಿ.

**ಅಥವಾ**

ಮೂರು ದಿವಸಗಳ ರಜೆಯನ್ನು ಕೇಳಿ ನಿಮ್ಮ ಕಾಲೇಜಿನ ಪ್ರಾಂಶುಪಾಲರಿಗೆ ಒಂದು ಪತ್ರ ಬರೆಯಿರಿ.

*****

**https://www.karnatakaboard.com**
**Whatsapp @ 9300930012**
**Send your old paper & get 10/-**
**अपने पुराने पेपर्स भेजे और 10 रुपये पायें,**
**Paytm or Google Pay से**

https://www.karnatakaboard.com